(ಗೊಂದಲ)

ಅಧ್ಯಕ್ಷರು : ಇವತ್ತು ಶೂನ್ಯ ವೇಳೆ ಇಲ್ಲ. ನಾಳೆ ಏನು ಬೇಕಾದರೂ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಆ) ವಿಷಯ : ಟೈಲರ್ಸ್‌ಗಳ ಬೇಡಿಕೆ ಬಗ್ಗೆ

ಶ್ರೀ ಅರಗ ಜ್ಞಾನೇಂದ್ರ : ..... ಹೊಲಿಗೆ ಹಾಕುವ ಟೈಲರ್ಸ್ .....

ಅಧ್ಯಕ್ಷರು : ಇದೇ ವಿಚಾರವನ್ನು ಆಗಲೇ ನಿಮ್ಮ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಆ ಬಗ್ಗೆ ಆಗಲೇ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಹೀಗಿರುವಾಗ ನೀವು ಮತ್ತೊಮ್ಮೆ ಅದೇ ವಿಚಾರವನ್ನು ಪ್ರಸ್ತಾಪ ಮಾಡಲು ಹೊರಟರೆ ಹೇಗೆ? ಅನವಶ್ಯಕವಾಗಿ ಚರ್ಚೆ ಮಾಡಿ ಸಭೆಯ ಸಮಯವನ್ನು ಹಾಳು ಮಾಡಬೇಡಿ.

ಶ್ರೀ ಅರಗ ಜ್ಞಾನೇಂದ್ರ : ಟೈಲರ್‌ಗಳು ಒಂದು ಲಕ್ಷ ಜನ ಇವತ್ತು ಬಂದಿದ್ದಾರೆ. ಅವರು ಕೆಲವೊಂದು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವುಗಳ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು. ಅವುಗಳನ್ನು ಈಡೇರಿಸುವುದಾಗಿ ಸರ್ಕಾರ ಘೋಷಣೆ ಮಾಡಬೇಕು. ಇಡೀ ರಾಜ್ಯದ ಮೂಲೆ ಮೂಲೆಗಳಿಂದ ಇವತ್ತು ಟೈಲರ್ಸ್ ಬೆಂಗಳೂರಿಗೆ ಬಂದಿದ್ದಾರೆ.

ಅಧ್ಯಕ್ಷರು : ಆಯಿತು, ನಿಮ್ಮ ನಾಯಕರು ಈ ವಿಚಾರವನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಶ್ರೀರಾಮರೆಡ್ಡಿಯವರೂ ಸಹ ಈಗ ನನ್ನ ಜೊತೆಗೆ ಅದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಮಾನ್ಯ ಸದಸ್ಯರಾದ ಸೀತಾರಾಮ್‌ರವರೂ ಕೂಡ ಅದರ ಬಗ್ಗೆ ನನಗೆ ಹೇಳಿದ್ದಾರೆ. ಕಾರ್ಮಿಕ ಸಚಿವರಾದ ತನ್ವೀರ್ ಸೇಠ್‌ರನ್ನೂ ಸಹ ಈಗ ಅಲ್ಲಿಗೆ ನಾನು ಕಳುಹಿಸುತ್ತಿದ್ದೇನೆ. 4–5 ಜನ ಭೇಟಿಯಾಗಬೇಕೆಂದಿದ್ದರೆ, ಸಂಜೆ 5 ಗಂಟೆಯ ನಂತರ ನನ್ನ ಛೇಂಬರಿಗೆ ಬರಬಹುದು. ಆಗ ನಾನು ಅವರನ್ನು ಭೇಟಿ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹೊಲಿಗೆದಾರರ ಮೇಲೆ ಸಿಟ್ಟು ಮಾಡಿಕೊಳ್ಳಬಾರದು. ಅವರು ನಮ್ಮ ಬಟ್ಟೆನೆಲ್ಲಾ ಹೇಗೇಗೋ ಹೊಲೆಯಬಹುದು. ಹಾಗಾಗಿ ಅವರ ಬೇಡಿಕೆಗಳ ಬಗ್ಗೆ ಸರ್ಕಾರ ಸೌಜನ್ಯ ಪೂರ್ಣವಾಗಿ ಅವರನ್ನು ಕರೆಸಿ ಮಾತನಾಡಬೇಕು. ನಮ್ಮ ಬಟ್ಟೆಗಳನ್ನು ಹೊಲಿಯುವವರು ಅವರೇ. ಅವರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಅವರು ನಮ್ಮ ಬಟ್ಟೆಗಳನ್ನು ಹೇಗೇಗೋ ಹೊಲಿದರೆ ನಮ್ಮ ಕಥೆ ಏನಾಗಬಹುದು?

ಅಧ್ಯಕ್ಷರು : ಈಗಾಗಲೇ ಅದರ ಬಗ್ಗೆ ಹೇಳಿಯಾಗಿದೆ. ಮತ್ತೆ ಅದರ ಬಗ್ಗೆ ಏಕೆ ಪ್ರಸ್ತಾಪ ಮಾಡುತ್ತೀರಿ?

ಶ್ರೀ ಧರ್ಮಸಿಂಗ್ : ಅವರ ಬೇಡಿಕೆಗಳ ಪತ್ರವನ್ನು ತೆಗೆದುಕೊಂಡು, ಇದರ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆಸುತ್ತೇನೆ. ಅದರ ಬಗ್ಗೆ ಸಮಂಜಸವಾಗಿ ಚರ್ಚೆಯಾಗುತ್ತದೆ. ಈ ಬಗ್ಗೆ ಮತ್ತೊಂದು ದಿನಾಂಕವೊಂದನ್ನು ನಿಗದಿಪಡಿಸಿ, ಅವರ ಕೆಲವು ಪ್ರತಿನಿಧಿಗಳೊಂದಿಗೆ ತಮ್ಮ ಜೊತೆಗೆ ಕೂಡ ಮಾತನಾಡುತ್ತೇನೆ.

ಅಧ್ಯಕ್ಷರು : ಕಾರಜೋಳರವರೇ, ತಮ್ಮ ವಿಷಯವನ್ನು ಇವತ್ತು ಮಧ್ಯಾಹ್ನ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವೇಕೆ ನಿಂತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ : ಅಂಡಮಾನ್ ದ್ವೀಪದಲ್ಲಿ ಚಾಮರಾಜನಗರದವರು ಸಿಕ್ಕಿ ಹಾಕಿಕೊಂಡಿದ್ದಾರೆ. ಅವರನ್ನು ಇಲ್ಲಿಗೆ ಕರೆಸಬೇಕಾಗಿದೆ. ಆ ಬಗ್ಗೆ ಪ್ರಸ್ತಾಪಿಸುವುದಿದೆ. ದಯವಿಟ್ಟು ತಾವು ಅವಕಾಶ ನೀಡಿದರೆ, ಒಂದೇ ಒಂದು ನಿಮಿಷದಲ್ಲಿ ಅದನ್ನು ಪ್ರಸ್ತಾಪ ಮಾಡಿಬಿಡುತ್ತೇನೆ.

ಅಧ್ಯಕ್ಷರು : ತಾವು ನನ್ನ ಗಮನಕ್ಕೆ ತರದೇ, ತಮ್ಮಷ್ಟಕ್ಕೆ ತಾವೇ ವಿಷಯ ಪ್ರಸ್ತಾಪಿಸಲು ನಿಂತುಕೊಂಡರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ತಮಗೆ ಈ ಬಗ್ಗೆ ತಿಳಿಸಿದ್ದೇನೆ.

ಅಧ್ಯಕ್ಷರು : ಆಯಿತು. ಒಂದೇ ಒಂದು ನಿಮಿಷದಲ್ಲಿ ವಿಷಯವನ್ನು ಪ್ರಸ್ತಾಪಿಸಿ.

(ಇ) ವಿಷಯ : ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿ ಸಿಕ್ಕಿ ಹಾಕಿಕೊಂಡಿರುವ ಚಾಮರಾಜನಗರದ ಕಾರ್ಮಿಕರನ್ನು ವಾಪಸ್ ಕರೆಸಿಕೊಳ್ಳುವ ಬಗ್ಗೆ. ಹಾಗೂ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನ ಮಾನ ನೀಡುವ ಬಗ್ಗೆ. ಹಾಗೂ ಕಾಸರಗೋಡಿನ ವಿಚಾರದಲ್ಲಿ ನಿಯೋಗ ಕರೆದೊಯ್ಯುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತರುತ್ತಿದ್ದೇನೆ. ಚಾಮರಾಜನಗರದ 15 ಜನ ಕಾರ್ಮಿಕರು ಸುನಾಮಿ ದುರಂತ ನಡೆದ ಅಂಡಮಾನ್ ದ್ವೀಪದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಅಲ್ಲಿಂದ ಅವರು ಬರಲಿಕ್ಕಾಗುತ್ತಿಲ್ಲ. ಅವರನ್ನು ಕರೆಸುವ ಬಗ್ಗೆ ಸರ್ಕಾರ ತೀವ್ರವಾದ ಪ್ರಯತ್ನ ಮಾಡಬೇಕು. ಇವತ್ತು ಅದರ ಬಗ್ಗೆ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ವರದಿಯಾಗಿದೆ. ಚಾಮರಾಜನಗರದ 15 ಜನ ಕಾರ್ಮಿಕರು ಅಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಅವರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಿ, ಅವರನ್ನು ಇಲ್ಲಿಗೆ ಕರೆಸಿಕೊಳ್ಳಬೇಕು. ಈ ಬಗ್ಗೆ ಸರ್ಕಾರ ತನ್ನ ನಿಲುವನ್ನು ತಿಳಿಸಬೇಕು. ಎರಡನೆಯದಾಗಿ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವಂತೆ ಒತ್ತಾಯಿಸಲು ದೆಹಲಿಗೆ ನಿಯೋಗವೊಂದನ್ನು ಕರೆದುಕೊಂಡು ಹೋಗುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಅದರ ಬಗ್ಗೆ ಅವರು ಅನೇಕ ಕಡೆ ಹೇಳಿದ್ದಾರೆ. ಕಾಸರಗೋಡು....

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಯಾವುದೋ ವಿಷಯ ಪ್ರಸ್ತಾಪ ಮಾಡಿ, ಅಲ್ಲಿಂದ ಎಲ್ಲೆಲ್ಲಿಗೋ ಹೋಗುತ್ತಿದ್ದೀರಲ್ಲಾ? ಹೀಗಾದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಒಂದೇ ನಿಮಿಷ ಸಾರ್, ನಾನು ಇದನ್ನು ಮುಗಿಸಿಬಿಡುತ್ತೇನೆ. ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಕೊಡುವಂತೆ ದೆಹಲಿಗೆ ನಿಯೋಗವೊಂದನ್ನು ಕರೆದುಕೊಂಡು ಹೋಗುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಅನೇಕ ಬಾರಿ ಹೇಳಿದ್ದಾರೆ. ಯಾವಾಗ ನಿಯೋಗವನ್ನು ಕರೆದುಕೊಂಡು ಹೋಗಲಾಗುವುದು ಎಂಬ ಬಗ್ಗೆ ಅವರು ತಿಳಿಸಬೇಕು. ಕಾಸರಗೋಡಿನ ವಿಚಾರದಲ್ಲಿ ಸಹ ನಿಯೋಗವೊಂದನ್ನು ಕರೆದೊಯ್ಯುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಭೆಗಳಲ್ಲಿ ಹೇಳಿದ್ದಾರೆ. ಈ ಎರಡು ಭರವಸೆಗಳನ್ನು ಯಾವಾಗ